# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 590
ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್
ಉತ್ತರಿಸುವ ದಿನಾಂಕ : 23-12-2022
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ಗಂಗಾ ಕಲ್ಯಾಣ ಯೋಜನೆಯಡಿ 2018 ರಿಂದ 2022ರ ಅವಧಿಯಲ್ಲಿ ಕೊರೆಯಲಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು; | ಕರ್ನಾಟಕ ಮಹರ್ಷಿ ವಾಲ್ಮೀಕಿ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ 2018-19 ರಿಂದ 2020-21ನೇ ಸಾಲಿನವರೆಗೆ ಒಟ್ಟು 8187 ಕೊಳವೆಬಾವಿಗಳನ್ನು ಕೊರೆಯಲಾಗಿರುತ್ತದೆ.<br><br>ಕ್ರ. ಸಂ \| ವರ್ಷ \| ಕೊರೆದ ಕೊಳವೆಬಾವಿ ಸಂಖ್ಯೆ<br>1 \| 2018-19 \| 4888<br>2 \| 2019-20 \| 1681<br>3 \| 2020-21 \| 1618<br> \| ಒಟ್ಟು \| 8187<br><br>ಸರ್ಕಾರದ ಆದೇಶ ಸಂಖ್ಯೆ ಸಕಇ 399 ಎಸ್‌ಡಿಸಿ 2022, ದಿನಾಂಕ:14.06.2022 ರಲ್ಲಿ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿರುವ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು 2022-23 ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯ ಗುರಿಗಳೊಂದಿಗೆ, ಹಿಂದಿನ ವರ್ಷಗಳಲ್ಲಿ ಮಂಜೂರಾಗಿ ಕೊರೆಯಲು ಬಾಕಿ ಇರುವ (2021-22ನೇ ಸಾಲಿನ) ಕೊಳವೆಬಾವಿಗಳನ್ನು ಫಲಾನುಭವಿಗಳಿಗೆ DBT ಮೂಲಕ ಸಹಾಯಧನ ಮತ್ತು ಸಾಲ ನೀಡಿ ಅನುಷ್ಠಾನಗೊಳಿಸಲು ಆದೇಶವಾಗಿರುತ್ತದೆ. ಅದರಂತೆ, DBT ಮೂಲಕ ಗುತ್ತಿಗೆದಾರರು / ಏಜೆನ್ಸಿಗಳನ್ನು ಎಂಪ್ಯಾನೆಲ್ ಮೆಂಟ್ ಮಾಡಿಕೊಳ್ಳಲು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಇ-ಪ್ರಕ್ಯೂರ್‌ಮೆಂಟ್ ಮೂಲಕ Expression of Interest ನಂತೆ ಟೆಂಡರ್ ಆಹ್ವಾನಿಸಿ ಏಜೆನ್ಸಿಗಳನ್ನು ಗುರುತಿಸುವ ಕಾರ್ಯ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೊಳವೆಬಾವಿ ಘಟಕಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| ಆ) | ಇವುಗಳಲ್ಲಿ ವಿಫಲವಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು; | ಗಂಗಾ ಕಲ್ಯಾಣ ಯೋಜನೆಯಡಿ ಆಹ್ವಾನಿಸುವ ಟೆಂಡರ್‌ನಲ್ಲಿ ಎಲ್-1 ಆಗಿ ಆಯ್ಕೆಯಾದ ಗುತ್ತಿಗೆದಾರರಿಂದ ಕರಾರು ಒಪ್ಪಂದ ಮಾಡಿಕೊಂಡು "ನೀರಿಲ್ಲದಿದ್ದರೆ ಹಣವಿಲ್ಲ" ಎಂಬ ಷರತ್ತಿನ ಮೂಲಕ ಎಲ್-1 ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವುದರಿಂದ ವಿಫಲವಾದ ಕೊಳವೆಬಾವಿಗಳು ಇರುವುದಿಲ್ಲ. |
| ಇ) | ಕೊರೆಯಲಾದ ಎಲ್ಲಾ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಪಂಪ್‌ಸೆಟ್‌ಗಳನ್ನು ಅಳವಡಿಸಿ ಯೋಜನೆಯನ್ನು | ಕೊರೆಯಲಾದ ಕೊಳವೆಬಾವಿಗಳ ಪೈಕಿ 5186 ಕೊಳವೆಬಾವಿಗಳಿಗೆ ಪಂಪ್‌ಸೆಟ್ ಹಾಗೂ ಇತರೆ ಸಾಮಾಗ್ರಿಗಳನ್ನು ಸರಬರಾಜು ಮಾಡಲಾಗಿದ್ದು, ಸರಬರಾಜು ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಈ ಪೈಕಿ 4957 |

| | | |
|---|---|---|
| | ಪೂರ್ಣಗೊಳಿಸಲಾಗಿದೆಯೇ; | ಕೊಳವೆಬಾವಿಗಳನ್ನು ವಿದ್ಯುದ್ದೀಕರಣಗೊಳಿಸಲಾಗಿರುತ್ತದೆ. ವಿದ್ಯುದ್ದೀಕರಣಕ್ಕೆ ಬಾಕಿ ಇರುವ ಕೊಳವೆಬಾವಿಗಳಿಗೆ ನಿಗಮದಿಂದ ಎಸ್ಕಾಂಗಳಿಗೆ ಪ್ರತಿ ಕೊಳವೆಬಾವಿಗೆ ಸಹಾಯಧನ ರೂ.50000/- ದಂತೆ ಮುಂಗಡವಾಗಿ ಅನುದಾನವನ್ನು ಪಾವತಿಸಿ ಮತ್ತು ವೈ.ಎಂ.ಡಿ / ಎಂ.ಎಸ್.ಡಿ ಮೊತ್ತವನ್ನು ಪಾವತಿಸಿ, ಆನ್-ಲೈನ್‌ನಲ್ಲಿ ನೊಂದಣಿ ಮಾಡಿಸಿ, ಸಿ.ಆರ್.ಸಲ್ಲಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮವಹಿಸಲಾಗಿರುತ್ತದೆ. |
| ಈ) | ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಲಾದ ಕೊಳವೆಬಾವಿಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ನೀಡಿರುವ ದೂರು ಅರ್ಜಿಗಳ ಕುರಿತು ಸರ್ಕಾರ ಏನು ಕ್ರಮಕೈಗೊಂಡಿದೆ; | ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಲಾದ ಕೊಳವೆಬಾವಿಗಳಲ್ಲಿ ಅಕ್ರಮ ನಡೆದಿರುವ ಕುರಿತು ಯಾವುದೇ ದೂರಿನ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. |
| ಉ) | ನಕಲಿ ದಾಖಲೆ ಸಲ್ಲಿಸಿ ಬಿಲ್ ಮಾಡಿರುವುದರ ಬಗ್ಗೆ ತನಿಖೆ ನಡೆದಿದೆಯೇ; | ನಕಲಿ ದಾಖಲೆ ಸಲ್ಲಿಸಿ ಬಿಲ್ ಮಾಡಿರುವ ಪ್ರಕರಣಗಳು ನಿಗಮದಲ್ಲಿ ದಾಖಲಾಗಿರುವುದಿಲ್ಲ. |
| ಊ) | ಅಕ್ರಮವೆಸಗಿರುವ ಏಜೆನ್ಸಿಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆಯೇ? | ಅನ್ವಯಿಸುವುದಿಲ್ಲ. |

ಸಕಇ 510 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು